**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು**

**ಸಿ.ಸಿ.ನಂ.454/2019**

**ದಿನಾಂಕಃ15.09.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯುಃ4 ಸಿ.ಡಬ್ಲ್ಯುಃ5

ಸಾಕ್ಷಿಯ ಹೆಸರು ಃ ಚಂದ್ರಪ್ಪ
ತಂದೆಯ ಹೆಸರು ಃ ರಂಗಪ್ಪ
ವಯಸ್ಸು ಃ 58 ವರ್ಷ
ಉದ್ಯೋಗ ಃ ಕೂಲಿ
ವಾಸ ಃ ಯರೇಹಳ್ಳಿ

**ಮುಖ್ಯ ವಿಚಾರಣೆಃ ಮಾನ್ಯ ಹಿ ಸ ಸ ಅ ರವರಿಂದಃ**

ನಿಪಿ-10 ದಾಖಲೆಯಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2-3 ವರ್ಷಗಳ ಹಿಂದೆ ನಮ್ಮ ನೆಂಟರ ಮನೆಗೆ ಹೋದಾಗ ತುಮಕೂರಿನಲ್ಲಿ ಮಾಡಿರುತ್ತೇನೆ, ನಿಪಿ-10 ರಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ-11 ರ ಛಾಯಾಚಿತ್ರದಲ್ಲಿ ನಾನು ಇದ್ದೇನೆ ಅದನ್ನು ಎಲ್ಲಿ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-11 ರಿಂದ 13 ರ ಛಾಯಾಚಿತ್ರಗಳಲ್ಲಿರುವ ವ್ಯಕ್ತಿಗಳು ನನಗೆ ಪರಿಚಯ ಇರುವುದಿಲ್ಲ.

ಸಾಕ್ಷಿಗೆ ನಿಪಿ-4 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಬೀರೂರಿನ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ-4 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಿಪಿ-5 ಮತ್ತು 6 ರ ಛಾಯಾಚಿತ್ರಗಳಲ್ಲಿ ನಾನು ಇದ್ದೇನೆ, ಅವುಗಳನ್ನು ಯಾವ ಸಂದರ್ಭದಲ್ಲಿ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿದ್ದು ಸಾಕ್ಷಿಯ ಹೇಳಿಕೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಹಿಸಸಅ ಅವರಿಂದಃ**

ದಿಃ15.08.2015 ರಂದು ಸಂಜೆ 5.30 ಗಂಟೆಗೆ ಪೋಲೀಸರು ನನ್ನನ್ನು ತುಮಕೂರಿನ ದ್ವಾರಕ ರೆಸಿಡೆನ್ಸಿಗೆ ಕರೆದುಕೊಂಡು ಹೋಗಿರುತ್ತಾರೆ ಅಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು, ಚಾಸಾ-1,3 ರವರು ಹಾಗೂ ಪೋಲೀಸರು ಇದ್ದರು ಅಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-1 ರವರು ನಮ್ಮನ್ನು ದ್ವಾರಕ ರೆಸಿಡೆನ್ಸಿಯ 108 ನೇ ಕೊಠಡಿಗೆ ಕರೆದುಕೊಂಡು ಹೋಗಿ ಸದರಿ ಕೊಠಡಿಯಲ್ಲಿ ಆರೋಪಿತರು ಚಾಸಾ-1 ರವರಿಂದ ರೂ.20,00,000/-ಗಳನ್ನು ಪಡೆದುಕೊಂಡು ಮೋಸ ಮಾಡಿರುತ್ತಾರೆ ಎಂದು ಮಹಜರ್ ಕ್ರಮ ಜರುಗಿಸಿರುತ್ತಾರೆ ಅಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-11 ರಿಂದ 13 ರ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಅಂದರೆ ಸರಿಯಲ್ಲ.

ದಿಃ31.07.2015 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಪೋಲೀಸರು ನನ್ನನ್ನು ಬೀರೂರು ಪೋಲೀಸ್ ಠಾಣೆಗೆ ಕರೆಸಿದ್ದರು ಅಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ-8 ರವರು ಇದ್ದೆವು ಅಂದರೆ ಸರಿಯಲ್ಲ. ಅಲ್ಲಿ ಚಾಸಾ-1 ರವರು ಹಾಜರುಪಡಿಸಿದ 25 ಕಾಗದದ ಬಂಡಲುಗಳನ್ನು ಪೋಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಅವುಗಳಲ್ಲಿ ಎರಡು ಬಂಡಲುಗಳ ಹಿಂಭಾಗ ಮತ್ತು ಮುಂಭಾಗದಲ್ಲಿ ತಲಾ ಒಂದು ನೋಟುಗಳಂತೆ ರೂ.1,000/- ಮುಖಬೆಲೆಯ 4 ನೋಟುಗಳನ್ನು ವಶಪಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ ಹಾಗೂ ಹಣದಂತೆ ಕಾಣುವ ಕಾಗದದ ತುಂಡುಗಳನ್ನು ಜೋಡಿಸಿರುವ ಬಂಡಲುಗಳನ್ನು ತುಂಬಿರುವ ಕಪ್ಪು ಚೀಲವನ್ನು ಪೋಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಅದೇ ಸಮಯದಲ್ಲಿ ಚಾಸಾ-1 ರವರು ಒಂದು ವಿಜಯಾ ಬ್ಯಾಂಕ್ ನ ಚಲನ್ ಪ್ರತಿ, ಮುತ್ತೂಟ್ ಫೈನಾನ್ಸ್ ನಲ್ಲಿ ಸಾಲದ ಪಡೆದ ಬಗ್ಗೆ ದಾಖಲಾತಿ ಹಾಗೂ ಕೆ.ಆರ್.ನಗರದ ವಿಜಯಾ ಬ್ಯಾಂಕ್ ನ ಪಾಸುಪುಸ್ತಕದ ದಾಖಲಾತಿಗಳನ್ನು ಪೋಲೀಸರ ಮುಂದೆ ಹಾಜರುಪಡಿಸಿದ್ದು, ಈ ಎಲ್ಲಾ ವಸ್ತುಗಳನ್ನು ಪೋಲೀಸರು ಅಮಾನತ್ತುಪಡಿಸಿಕೊಂಡು ನಿಪಿ-4 ರಂತೆ ಮಹಜರ್ ಬರೆದು ನಿಪಿ-5 ಮತ್ತು 6 ರಂತೆ ಛಾಯಾಚಿತ್ರವನ್ನು ತೆಗೆಯಲು

ಪಿ.ಡಬ್ಲ್ಯೂ:4 ಸಿ.ಡಬ್ಲ್ಯೂ:5

ನನಗೆ ಓದಿ ತಿಳಿಸಿ ನನ್ನ ಸಹಿ ಪಡೆದಿರುತ್ತಾರೆ ಅಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರುಗಳು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.